reconstitution of the Committee to oversee the Education facilities to Anglo-Indian Community students in Karnataka and convening meetings of the Committee at the earliest. A committee under the Chairmanship of the Hon'ble Minister for Education was constituted by the State Government to oversee the Educational facilities to the Anglo-Indian students in Karnataka. This Committee met only once during the present assembly in 1990 and that too without the present nominated MLA but with its the Ex-MLA. I have brought it to the notice of the Government and it is a serious lapse on the part of the administration and the Government should take action against those members who are responsible for the error. Thereafter the Committee did not meet at all inspite of my repeated requests for convening a meeting. I had also requested to reconstituted this committee to ensure its effective functioning. In fact the previous Education Minister had issued directions to the concerned officials to convene a meeting of the committee. Unfortunately no meeting has taken place till today nor has the Committee been reconstitute. I therefore request the Hon'ble Minister for Education to reconstituted this Committee and convene a meeting of this Committee at the earliest, as there are many educational problems relating to the Anglo-Indian Community. Hence I request the Hon'ble Minister for Primary Education to make a statement to the House in this regard.

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡಲು ಇಚ್ಛಿಪಡುತ್ತೇನೆ.

ಕರ್ನಾಟಕದಲ್ಲಿ ಆಗ್ಲೋ ಇಂಡಿಯನ್ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ದಿನಾಂಕ 1.1.1990 ರಂದು ಒಂದು ಸಮಿತಿಯನ್ನು ರಚಿಸಲಾಗಿತ್ತು. ಅದನ್ನು ದಿನಾಂಕ 28.7.1990 ರಂದು ಪುನರ್ ರಚಿಸಲಾಯಿತು ಮತ್ತು ಆ ಸಮಿತಿಗೆ ಮಾನ್ಯ ಶ್ರೀ ಡೆರಿಕ್ ಪುಲ್‌ಇನ್ಫಾರವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಈ ಸಮಿತಿಗೆ ಇನ್ನೂ ಹೆಚ್ಚಿನ ಆಂಗ್ಲೋ ಇಂಡಿಯನ್ ಜನಾಂಗದ ಸದಸ್ಯರನ್ನು ನೇಮಿಸುವ ಆಸಕ್ತಿಯನ್ನು ಸರ್ಕಾರವು ಹೊಂದಿರುತ್ತದೆ. ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ಆಳವಾಗಿ ಚರ್ಚಿಸಲು ಪುನರ್ ರಚಿಸಲಾಗುವ ಸಮಿತಿಯ ಸಭೆಯನ್ನು ಶೀಘ್ರದಲ್ಲಿಯೇ ಕರೆಯಲಾಗುವುದು.

(9) ವಿಜಾಪುರ ತಾಲ್ಲೂಕಿನಲ್ಲಿ 110(11) ಕೆ. ವಿ. ವಿದ್ಯುತ್ ಸ್ಥಾವರ ಕೇಂದ್ರದ ಸ್ಥಾಪನೆ.

ಶ್ರೀ ಜಿ. ಜಿ. ಯಲಗುತ್ತಿ (ಬಸವಗಿ):- ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ಘಟಪ್ರಭಾ ಮತ್ತು ಕೃಷ್ಣಾ ನದಿಗಳು ಹರಿಯುತ್ತಿದ್ದು ಈ ನದಿಯ ನೀರಿನಿಂದ ಬೆಳೆ ಬೆಳೆಯುವ ರೈತರಿಗೆ ವಿದ್ಯುತ್

ಅಭಾವದಿಂದ ಪಂಪ್‌ಸೆಟ್‌ಗಳಿಗೆ ತುಂಬಾ ತೊಂದರೆಯಾಗಿ ಕಂಗಾಲಾಗಿದ್ದಾರೆ. ಆದ್ದರಿಂದ 1993–94ನೇ ಪ್ರಸ್ತುತ ವರ್ಷದಲ್ಲಿ ಬೀಳಗಿ ತಾಲ್ಲೂಕಿನಲ್ಲಿ 110 (11) ಕೆ. ವಿ. ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿ ಈ ಭಾಗದ ರೈತರ ಪಂಪ್‌ಸೆಟ್‌ಗಳಿಗೆ ಆಗಿರುವ ವಿದ್ಯುತ್ ಅಭಾವವನ್ನು ಉತ್ತಮ ಪಡಿಸಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ಬಯಸುತ್ತೇನೆ.

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕನ್ನಡದಲ್ಲಿನ ಹೇಳಿಕೆಯನ್ನು ಕೊಟ್ಟು ಆಂಗ್ಲ ಭಾಷೆಯ ಹೇಳಿಕೆಯನ್ನು ಓದುತ್ತಿದ್ದಾರೆ. ಇದು ಸರಿಯಲ್ಲ ಅದು ಆಗುವುದಿಲ್ಲ. ರಾಜ್ಯಕ್ಕೆ ಸದನಕ್ಕೆ ಇದು ಅಪಮಾನ. ಅವರಿಗೆ ಕನ್ನಡವೇ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ತಾವು ಏಪ್ರಿಲ್ ಒಂದರವರೆಗೆ ಕಾಲಾವಕಾಶವನ್ನು ಕನ್ನಡ ಸಲುವಾಗಿ ಕೊಟ್ಟಿದ್ದೀರಿ.

ಶ್ರೀ ಕೆ. ಎ. ನಿಸಾರ್ ಅಹಮದ್:– ಮಾನ್ಯ ಅಧ್ಯಕ್ಷರೇ, ನನಗೆ ಕಾಲಾವಕಾಶ ಕೊಡಿ. ಕನ್ನಡವನ್ನು ಕಲಿಯುತ್ತಿದ್ದೇನೆ. ನನಗೆ ಕನ್ನಡದಲ್ಲಿ ಓದುವುದಕ್ಕೆ ಬರುತ್ತದೆ. ಆದರೆ ತಪ್ಪು ಓದಬಾರದೆಂದು ನಾನು ಆಂಗ್ಲಭಾಷೆಯಲ್ಲಿ ಓದುತ್ತಿದ್ದೇನೆ. ಸ್ವಲ್ಪ ಅವಕಾಶ ಕೊಡಿ.

ಶ್ರೀ ಮಾಟಾಳ್ ನಾಗರಾಜ್:– ಏಪ್ರಿಲ್ ಒಂದು ಎಂದರೆ ಗೊತ್ತಲ್ಲ. ಆ ಪರಿಸ್ಥಿತಿಯಲ್ಲಿದ್ದೇವೆ ನಾವು.

ಶ್ರೀ ಕೆ. ಎ. ನಿಸಾರ್ ಅಹಮದ್ (ಮಾನ್ಯ ಇಂಧನ ಖಾತೆ ರಾಜ್ಯ ಸಚಿವರು):– ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಈಗ ಬೀಳಗಿಯಲ್ಲಿರುವ 33:11 ಕೆವಿ 2 x 5 ಎಂ. ವಿ. ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಬೀಳಗಿ ಉಪವಿದ್ಯುತ್ ಕೇಂದ್ರವು ಪೂರ್ಣವಾಗಿ ಲೋಡ್ ಆಗಿರುತ್ತದೆ ಮತ್ತು ಕುಂದರಗಿ ಗ್ರಾಮಕ್ಕೆ ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ ಸ್ವಲ್ಪ ಕಡಿಮೆಯಾಗಿರುವುದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ಬಂದಿದೆ. ಈ ತೊಂದರೆಯನ್ನು ನಿವಾರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೀಳಗಿಯ ಉಪವಿದ್ಯುತ್ ಕೇಂದ್ರವನ್ನು 110 ಕೆವಿ ಉಪಕೇಂದ್ರವನ್ನಾಗಿ ಪರಿವರ್ತಿಸಲು ಹಾಗೂ ಕುಂದರಗಿಯಲ್ಲಿ 33:11 ಕೆವಿ 1x5 ಎಂ.ವಿ. ಎ. ಸಾಮರ್ಥ್ಯದ ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಮಂಜೂರಾತಿ ನೀಡಿರುತ್ತದೆ. ಆದರೆ ಬೀಳಗಿಯ 110 ಕೆವಿ ಉಪ ವಿದ್ಯುತ್ ಕೇಂದ್ರದ ಕೆಲಸವನ್ನು ಮೊದಲು ಪ್ರಾರಂಭಿಸಿ, ನಂತರ ಕುಂದರಗಿ ಉಪವಿದ್ಯುತ್ ಕೇಂದ್ರದ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಪ್ರಕಟಣೆ

1. ಸದಸ್ಯರಾದ ಶ್ರೀ ಎಂ. ರಾಮಪ್ಪನವರ ಮೇಲೆ ನೀಡಿದ್ದ ಹಕ್ಕು ಚ್ಯುತಿ ಸೂಚನೆಯನ್ನು ಹಕ್ಕು ಭಾಧ್ಯತಾ ಸಮಿತಿಗೆ ಒಪ್ಪಿಸುವ ಬಗ್ಗೆ:

ಅಧ್ಯಕ್ಷರು:– ದಿನಾಂಕ 23.2.1993ರಂದು ಮಾನ್ಯ ಸದಸ್ಯರಾದ ಶ್ರೀ ಮಾಟಾಳ್ ನಾಗರಾಜ್‌ರವರು